# ಕುವೆಂಪು ವಿಶ್ವವಿದ್ಯಾಲಯ

**ಹಣಕಾಸು ವಿಭಾಗ, ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451**

---

ಸಂಖ್ಯೆ: ಕುವಿ: ಹವಿ; ಆಸ; 4492 :2023-24

ದಿನಾಂಕ:22-11-2023

ಮಾನ್ಯರೆ,

ವಿಷಯ: 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಕಳುಹಿಸುತ್ತಿರುವ ಕುರಿತು.

* * *

ದಿನಾಂಕ:09-11-2023ರಂದು ನಡೆದ ಕುವೆಂಪು ವಿಶ್ವವಿದ್ಯಾನಿಲಯದ 2023-24ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಕಳುಹಿಸಿಕೊಡಲಾಗಿದೆ.

ಸದರಿ ನಡಾವಳಿಗಳನ್ನು ಕಳುಹಿಸಿದ 07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ವಂದನೆಗಳೊಂದಿಗೆ,

ಸಹಿ/-
ಹಣಕಾಸು ಅಧಿಕಾರಿ

**ಇವರಿಗೆ :**

1. ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ- 577 451. ಇವರ ಮಾಹಿತಿ ಮತ್ತು ಅವಗಾಹನೆಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, 2ನೇ ಮಹಡಿ, ಬೆಂಗಳೂರು – 560001.
3. ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು – 560001.
4. ನಿರ್ದೇಶಕರು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, 7ನೇ ಮಹಡಿ, ಬೆಂಗಳೂರು – 560001.
5. ಶ್ರೀ. ಕುಮಾರೇಗೌಡ, "ಜನನಿ" ಮುಗತಿಹಳ್ಳಿ ಪೋಸ್ಟ್, ಚಿಕ್ಕಮಗಳೂರು ತಾಲೂಕ ಮತ್ತು ಜಿಲ್ಲೆ-577 133
6. ಮಾನ್ಯ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577451.
7. ಮಾನ್ಯ ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577451.

**ಪ್ರತಿಗಳು:**

01. ಆಪ್ತ ಸಹಾಯಕರು : ಕುಲಪತಿಗಳು/ ಕುಲಸಚಿವರು/ ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ- 577451.

ಹಣಕಾಸು ಅಧಿಕಾರಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ 577 451

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:09-11-2023ರಂದು ಗುರುವಾರ ಪೂರ್ವಾಹ್ನ 11-00 ಘಂಟೆಗೆ ಬೆಂಗಳೂರಿನ ಕುಮಾರಕೃಪಾ ಅತಿಥಿಗೃಹದ ಸಭಾಂಗಣ (02)ರಲ್ಲಿ ನಡೆದ 2023-24ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| **ಹಾಜರಾದ ಸದಸ್ಯರು:** | ಪದನಾಮ |
|---|---|
| 1. **ಪ್ರೊ. ಎಸ್. ವೆಂಕಟೇಶ್**<br>ಮಾನ್ಯ ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನ್ಸಸೌಧ, ಬೆಂಗಳೂರು | ಸದಸ್ಯರು |
| 3. **ಶ್ರೀ ಮಹಾಂತಪ್ಪ. ಎಸ್. ತುರಕನೂರ**<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. **ಶ್ರೀ ಗುರುರಾಜ್ ರಾವ್**<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. **ಶ್ರೀ ಕುಮಾರೇಗೌಡ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 6. **ಶ್ರೀ ಸ್ನೇಹಲ್ ಸುಧಾಕರ ಲೋಖಂಡೆ,** ಐ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯರು |
| 7. **ಪ್ರೊ. ಗೋಪಿನಾಥ್. ಎಸ್. ಎಂ.**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 8. **ಶ್ರೀ. ಜಿ. ಬಂಗಾರಪ್ಪ.** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು 2023-24ನೇ ಸಾಲಿನ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಆತ್ಮೀಯವಾಗಿ ಸ್ವಾಗತ ಕೋರಿ, ಕಾರ್ಯಸೂಚಿಯ ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2023-ಹಸ:1:01 | **ದಿನಾಂಕ:15-03-2023ರಂದು ನಡೆದ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| ನಿರ್ಣಯ: | ದಿನಾಂಕ:15-03-2023ರಂದು ನಡೆದ 2022-23ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 2023-ಹಸ:1:02 | ದಿನಾಂಕ: 15-03-2023ರಂದು ನಡೆದ 2022-23ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. |
| ನಿರ್ಣಯ: | ದಿನಾಂಕ:15-03-2023ರಂದು ನಡೆದ 2022-23ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| 2023-ಹಸ:1:03 | **2022-23ನೇ ಆರ್ಥಿಕ ವರ್ಷದ ಏಪ್ರಿಲ್-2022 ರಿಂದ ಮಾರ್ಚ್-2023ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅವಲೋಕನ ಹಾಗೂ ಅನುಮೋದನೆ ಕುರಿತು.** |
| ನಿರ್ಣಯ: | 2022-23ನೇ ಆರ್ಥಿಕ ವರ್ಷದ ಏಪ್ರಿಲ್-2022 ರಿಂದ ಮಾರ್ಚ್-2023ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳಿಗೆ ಅನುಮೋದನೆಯನ್ನು ನೀಡಲು ಹಣಕಾಸು ಅಧಿಕಾರಿಗಳು ಸಭೆಯನ್ನು ಕೋರಿದರು. ಸಭೆಯು ಸುದೀರ್ಘ ಚರ್ಚೆಯ ನಂತರ, 2022-23ನೇ ಆರ್ಥಿಕ ವರ್ಷದ ಏಪ್ರಿಲ್-2022 ರಿಂದ ಮಾರ್ಚ್-2023ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಅನುಮೋದಿಸಲಾಯಿತು. |
| 2023-ಹಸ:1:04 | **2022-23ನೇ ಅರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆ ಕುರಿತು.** |
| ನಿರ್ಣಯ: | 2022-23ನೇ ಅರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದನೆ ನೀಡುವಂತೆ ಹಣಕಾಸು ಅಧಿಕಾರಿಗಳು ಸಭೆಯನ್ನು ಕೋರಿದರು.<br><br>ಸಭೆಯು ಪರಿಶೀಲಿಸಿದ ನಂತರ ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು. ಆರ್ಥಿಕ ವ್ಯವಹಾರ ನಡೆಸದ ಅನಗತ್ಯ ಖಾತೆಗಳನ್ನು ಮುಕ್ತಾಯಗೊಳಿಸುವಂತೆ ತಿಳಿಸಿದರು. ಈಗಾಗಲೇ ವ್ಯವಹಾರ ನಡೆಸದೆ ಇರುವ 06 ಖಾತೆಗಳನ್ನು ಮುಕ್ತಾಯಗೊಳಿಸಲು ಮಾನ್ಯ ಕುಲಪತಿಗಳ ಅನುಮೋದನೆಯನ್ನು ಪಡೆಯಲಾಗಿದೆ ಎಂದು ಹಣಕಾಸು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. |

| | |
|---|---|
| | ಹಣಕಾಸು ಅಧಿಕಾರಿಗಳು 2023-24ನೇ ಸಾಲಿನ 34 ಖಾತೆಗಳ ಸ್ವೀಕೃತಿ ಮತ್ತು ವೆಚ್ಚಗಳ ವಿವರವನ್ನು ಸಭೆಯ ಗಮನಕ್ಕೆ ತಂದರು. ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಮಾತನಾಡಿ, ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ವಿವರವನ್ನು ಕೋರಿದರು. ಈ ಸಂಬಂಧ Cash flow ವಿವರವಾದ ಪಟ್ಟಿಯನ್ನು ಅವಗಾಹನೆಗೆ ತರಲಾಯಿತು. ಖಜಾನೆಯೊಂದಿಗೆ ಲೆಕ್ಕ ಸಮನ್ವಯ ಮಾಡಿರುವ ವಿವರವನ್ನು ಸಭೆಯು ಪರಿಶೀಲಿಸಲಾಯಿತು.<br><br>ಘನ ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಅರಣ್ಯ ಗುತ್ತಿಗೆ ನವೀಕರಣಕ್ಕಾಗಿ ಅನುದಾನ ಬಿಡುಗಡೆಗೊಳಿಸಲಾಗಿದ್ದು, ಸದರಿ ಮೊತ್ತವನ್ನು ವೆಚ್ಚ ಮಾಡದೇ ನಿಶ್ಚಿತ ಠೇವಣೆಯಲ್ಲಿ ತೊಡಗಿಸಿರುವ ಮೊತ್ತಕ್ಕೆ ವಿವರವನ್ನು ಸರ್ಕಾರದ ಪ್ರತಿನಿಧಿಗಳು ಕೋರಿದರು. ಮಾನ್ಯ ಕುಲಸಚಿವರು ಮಾತನಾಡಿ ಕೇಂದ್ರ ಅರಣ್ಯ ಇಲಾಖೆಯಿಂದ ಕೆಲವು ಮಾಹಿತಿಗಳನ್ನು ಕೋರಲಾಗಿದ್ದು, ಶೀಘ್ರವಾಗಿ ಅವುಗಳನ್ನು ಸರಿಪಡಿಸಿ ಸದರಿ ಮೊತ್ತವನ್ನು ಜಮೆ ಮಾಡಲಾಗುವುದೆಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಕುಲಪತಿಗಳು ಮಾತನಾಡಿ ಈ ಸಂಬಂಧ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಿ ತುರ್ತಾಗಿ ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.<br><br>ವಿವಿಧ ಠೇವಣಿಗಳನ್ನು ಪರಿಶೀಲಿಸಲಾಯಿತು. ಪೀಠಗಳಲ್ಲಿ ತೊಡಗಿರುವ ಮೂಲ ಅನುದಾನದ ಬಡ್ಡಿಯನ್ನು ವೆಚ್ಚ ಮಾಡದೇ ಪುನ: ಠೇವಣಿಯಲ್ಲಿ ಇರಿಸಲಾಗಿರುವುದನ್ನು ಆಕ್ಷೇಪಣೆ ವ್ಯಕ್ತಪಡಿಸಲಾಯಿತು. ಈ ಸಂಬಂಧ ಪೀಠಗಳ ಕಾರ್ಯಗಳನ್ನು ಅನುಷ್ಠಾನಗೊಳಿಸುವಂತೆ ತಿಳಿಸಿದರು. ಮಾನ್ಯ ಕುಲಸಚಿವರು ಮಾತನಾಡಿ ಪೀಠಗಳಲ್ಲಿ ಕ್ರೋಢೀಕೃತವಾಗಿರುವ ಬಡ್ಡಿಯನ್ನು ವೆಚ್ಚ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು. |

| Particulars | Cash (Rs. lakhs) | TDR |
|---|---|---|
| Opening Balance | 4370.65 | 5583.28 |
| Total Receipts | 19740.02 | 7131.87 |
| Total Expenditure | 15214.39 | 834.08 |
| Closing Balance | 4525.64 | 6297.79 |

| | |
|---|---|
| | ಎನ್.ಪಿ.ಎಸ್. ಗೆ ಸಂಬಂಧಿಸಿದಂತೆ ಅನುದಾನವನ್ನು ಸಭೆಯ ಮುಂದೆ ಕೋರಲಾಯಿತು. ಈ ಕುರಿತು ಜಂಟಿ ಕಾರ್ಯದರ್ಶಿಗಳು ಘನ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಪರಿಶೀಲಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.<br><br>ಎ.ಸಿ. ಬಿಲ್‌ನ ಮೂಲಕ ಮುಂಗಡವಾಗಿ ಪಡೆದು ಎನ್.ಡಿ.ಸಿ. ಬಿಲ್ ಅನ್ನು ನಿಯಮಾನುಸಾರ ತೀರುವಳಿಗೆ ಸಲ್ಲಿಸದೇ ಇರುವ ಬಗ್ಗೆ ಸಭೆಯು ತೀವ್ರವಾದ ಆಕ್ಷೇಪಣೆಯನ್ನು ವ್ಯಕ್ತಪಡಿಸಿತು. ಮಾನ್ಯ ಕುಲಸಚಿವರು ಮಾತನಾಡಿ ಇನ್ನುಮುಂದೆ ಯಾವುದೇ ಎ.ಸಿ. ಬಿಲ್‌ನ ಹಣ ಸೆಳೆಯಲು ಅವಕಾಶ ನೀಡಬಾರದಾಗಿ ಈ ಸಂಬಂಧ ಹಣಕಾಸು ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಲು ತಿಳಿಸಿದರು.<br><br>ಕನ್ನಡ ಕಂಪ್ಯೂಟರ್ ಸಾಕ್ಷರತೆಗೆ ಮೀಸಲಿಟ್ಟಿರುವ ಹಣವನ್ನು ವೆಚ್ಚ ಮಾಡುವಂತೆ ಸಭೆಯು ತಿಳಿಸಿತು.<br><br>ಸಭೆಯು ಸುದೀರ್ಘ ಚರ್ಚೆಯ ನಂತರ, 2022-23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಅನುಮೋದಿಸಲಾಯಿತು. |
| 2023-ಹಸ:1:05 | **2019-20 ಮತ್ತು 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.** |
| ನಿರ್ಣಯ: | 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಯನ್ನು ಕೋರಿದರು. ಸಭೆಯು ಕೂಲಂಕಷವಾಗಿ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿತು. ಬಾಕಿ ಇರುವ ಕಂಡಿಕೆಗಳಿಗೆ ತುರ್ತಾಗಿ ಅಡ್-ಹಾಕ್ ಸಮಿತಿ ಸಭೆಯನ್ನು ಏರ್ಪಡಿಸಿ ಇತ್ಯರ್ಥಪಡಿಸಲು ಸಭೆಯು ಸೂಚಿಸಿ, 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು. |
| 2023-ಹಸ:1:06 | **2023-24ನೇ ಆರ್ಥಿಕ ವರ್ಷದ ಏಪ್ರಿಲ್-2023 ರಿಂದ ಸೆಪ್ಟೆಂಬರ್-2023 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅನುಮೋದನೆ ಕುರಿತು.** |
| ನಿರ್ಣಯ: | 2023-24ನೇ ಆರ್ಥಿಕ ವರ್ಷದ ಏಪ್ರಿಲ್-2023 ರಿಂದ ಸೆಪ್ಟೆಂಬರ್-2023 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಸಭೆಯು ಅವಲೋಕಿಸಿತು. |

| | |
|---|---|
| 2023-ಹಸ:1:06 | ಅಧ್ಯಕ್ಷರ ಅಪ್ಪಣೆಯ ಮೇರಗೆ ಇತರೆ ವಿಷಯಗಳು. |
| 06.1: | ವಿಶ್ವವಿದ್ಯಾಲಯದ ನ್ಯಾಕ್‌ಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ. |
| ನಿರ್ಣಯ: | ನಿಯಮಾನುಸಾರ ಕ್ರಿಯಾ ಯೋಜನೆಯನ್ನು ತಯಾರಿಸಿ ಆಡಳಿತಾತ್ಮಕದೊಂದಿಗೆ ಅನುಮೋದನೆಯನ್ನು ಪಡೆದು ರೂ.250.00 ಲಕ್ಷಗಳಿಗೆ ವೆಚ್ಚ ಮಾಡಲು ಸಭೆಯು ಅನುಮೋದನೆ ನೀಡಲಾಯಿತು. |
| 06.2: | ರಾಜ್ಯ ವೇತನ ಶ್ರೇಣಿಯ ವಿಶ್ವವಿದ್ಯಾಲಯದ ನೌಕರರಿಗೆ ತಾತ್ಕಾಲಿಕ ಪರಿಹಾರ ಮಂಜೂರಾತಿ ಕುರಿತು. |
| ನಿರ್ಣಯ: | ಸರ್ಕಾರ ಆದೇಶದನ್ವಯ ಕ್ರಮವಹಿಸುವಂತೆ ಸರ್ಕಾರದ ಪ್ರತಿನಿಧಿಗಳು ತಿಳಿಸಿದರು. |
| 06.3: | ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ ನೌಕರರ ವೇತನವನ್ನು ಪಾವತಿಸುವ ಬಗ್ಗೆ. |
| ನಿರ್ಣಯ: | ವಿವರವಾದ ವಿದ್ಯಾರ್ಥಿಗಳ ಸಂಖ್ಯೆ, ಖಾಲಿ ಇರುವ ಹುದ್ದೆಗಳ ವಿವರ, ಭರ್ತಿಯಾಗಿರುವ ವಿವರ, ವಿಷಯವಾರು ಕಾರ್ಯನಿರ್ವಹಣಾ ತ:ಖ್ತೆಯನ್ನು ತಯಾರಿಸಿ ಸಂಪೂರ್ಣವಾದ ವಿವರವನ್ನು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸೂಚಿಸಿತು. ಹಾಗೂ ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಟೆಂಡರ್ ಕರೆಯಲು ತೀರ್ಮಾನಿಸಿತು. |
| 06.4: | ವಿಶ್ರಾಂತಿ ವೇತನಗಳ ಅನುದಾನಕ್ಕೆ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ. |
| ನಿರ್ಣಯ: | ವಿವರವಾದ ಪ್ರಸ್ತಾವನೆಯನ್ನು ಘನ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸೂಚಿಸಿತು. |
| 06.5: | ವಿಶ್ವವಿದ್ಯಾಲಯದ ವಾಹನ ಚಾಲಕರ ವೇತನವನ್ನು ಪಾವತಿಸುವ ಕುರಿತು. |
| | ಮಾನ್ಯ ಕುಲಸಚಿವರು(ಪ) ಇವರು ವಿಶ್ವವಿದ್ಯಾಲಯದಲ್ಲಿ ವಾಹನ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಹಂಗಾಮಿ/ ಸಂಚಿತ ವೇತನ ಆಧಾರದ ಮೇಲೆ ಮುಂದುವರಿಸುವಂತೆ ಸಭೆಯನ್ನು ಕೋರಿದರು. ಮಾನ್ಯ ಕುಲಸಚಿವರು ಮಾತನಾಡಿ, ಸಂಚಿತ/ ಹಂಗಾಮಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶವಿಲ್ಲವೆಂದು ಅಂಶವನ್ನು ಸಭೆಯ ಗಮನಕ್ಕೆ ತಂದರು. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಮಾತನಾಡಿ ಸಂಚಿತ/ ಹಂಗಾಮಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ನಿಯಮಾವಳಿಯಲ್ಲಿ ಅವಕಾಶ ಇಲ್ಲವೆಂದು ಸರ್ಕಾರವು ಈಗಾಗಲೇ ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆ ಮತ್ತು ಆದೇಶಗಳಲ್ಲಿ ಸ್ಪಷ್ಟವಾಗಿ ತಿಳಿಸಿ ಅದರಂತೆ ಕ್ರಮವಹಿಸುವಂತೆ ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು. |

| | |
|---|---|
| | ಮುಂದುವರೆದು. ಆದಾಗ್ಯೂ ಕೂಡ ನೇಮಕ ಮಾಡಿಕೊಂಡಿರುವುದು ನಿಯಮಾವಳಿಗೆ ವಿರುದ್ಧವಾಗಿರುತ್ತದೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಹಾಗೂ ಈ ಸಭೆಗೆ ಮಂಡಿಸಿರುವ 2019-20ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಸಹ ಆಕ್ಷೇಪಣೆ ವ್ಯಕ್ತಪಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಎ.ಜಿ. ಆಡಿಟ್ ವರದಿಯಲ್ಲಿ ಸೆಕ್ಷನ್ (ಬಿ)(08)ರಲ್ಲಿ ಸಹ ಆಕ್ಷೇಪಣೆಯಾಗಿರುವ ಅಂಶವನ್ನು ಸಹ ಸಭೆಯು ಪರಿಶೀಲಿಸಿತು. ಅಗತ್ಯವಿದ್ದಲ್ಲಿ ಕಾರ್ಯಭಾರದ ಅನುಸಾರ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

| | |
|---|---|
| (ಶ್ರೀ ಜಿ. ಬಂಗಾರಪ್ಪ ಕೆ.ಎಸ್.ಎ.ಎಸ್.)<br>ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು | ಸಹಿ/-<br>(ಪ್ರೊ. ಎಸ್. ವೆಂಕಟೇಶ್)<br>ಕುಲಪತಿಗಳು ಹಾಗೂ ಅಧ್ಯಕ್ಷರು |